ದಿನಾಂಕಃ 04.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 2, 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:**

ನಾನು ಕಳೆದ 51 ವರ್ಷದಿಂದ ಚಿಕ್ಕಮಗಳೂರಿನ ಗಾಂಧೀನಗರನಲ್ಲಿ ವಾಸಿಸುತ್ತಿದ್ದೇನೆ. 1 ನೇ ವಾದಿ ಗೆಂಡೇಹಳ್ಳಿ ಮತ್ತು ಚಿಕ್ಕಮಗಳೂರು ಪೇಟೆ ಎರಡೂ ಕಡೆ ವಾಸವಿರುತ್ತಾರೆ. ನನ್ನ ತಂದೆಯ ಹೆಸರು ಸೇಖ್ ಹುಸೇನ್ ಬಾಜೀ ಸಾಹೇಬ್. ನನ್ನ ತಾಯಿಯ ಹೆಸರು ಮಾಜನ್ ಬೀ. ನನ್ನ ತಂದೆ ಸೇಖ್ ಹುಸೇನ್ ಬಾಜೀ ಸಾಹೇಬ್ ರವರಿಗೆ ನನ್ನ ತಾಯಿ ಮಾಜನ್ ಬೀ ಎರಡನೇ ಪತ್ನಿ ಎಂದರೆ ಸರಿ. ನನ್ನ ತಂದೆ ಅವರ ಮೊದಲನೇ ಹೆಂಡತಿಯ ಮರಣದ ನಂತರ ನನ್ನ ತಾಯಿಯನ್ನು ವಿವಾಹವಾಗಿದ್ದರು ಎಂದರೆ ಸರಿ. ನನ್ನ ತಂದೆಯ ಮೊದಲನೇ ಪತ್ನಿಗೆ ಒಬ್ಬರು ಹೆಣ್ಣು ಮಗಳು ಇದ್ದರು ಎಂದರೆ ಸರಿ. ಆ ಹೆಣ್ಣುಮಗಳಿಗೆ ಮೂರು ಜನ ಗಂಡುಮಕ್ಕಳು ಹಾಗೂ ಎರಡು ಜನ ಹೆಣ್ಣುಮಕ್ಕಳು ಇದ್ದಾರೆ. ಈ ವಿಚಾರವನ್ನು ದಾವ ಸಲ್ಲಿಸುವ ಕಾಲಕ್ಕೆ ನನ್ನ ವಕೀಲರಿಗೆ ತಿಳಿಸಿದ್ದೆ. ನನ್ನ ತಂದೆಯ ಮೊದಲನೇ ಪತ್ನಿಯ ಮಗಳು ಒಂದು ವರ್ಷದ ಹಿಂದೆ ತೀರಿಕೊಂಡರು ಎಂದರೆ ಸಾಕ್ಷಿಯು ಸದರಿರವರು ತೀರಿಹೋಗಿ ಈಗ 11 ವರ್ಷವಾಗಿದೆ ಎಂದು ನುಡಿಯುತ್ತಾರೆ. ಅವರ ಮಕ್ಕಳೆಲ್ಲರೂ ವಯಸ್ಕರು ಎಂದರೆ ಸರಿ. ಸದರಿರವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ನನ್ನ ತಂದೆ ತಾಯಿ ಬಿಟ್ಟುಹೋಗಿರುವ ಜಮೀನುಗಳ ಮೇಲೆ ನನಗೆ ಮತ್ತು 1 ನೇ ವಾದಿ ಹಾಗೂ ಪ್ರತಿವಾದಿಗಳಿಗೆ ಎಷ್ಟು ಹಕ್ಕು ಇದೆಯೋ ನನ್ನ ತಂದೆಯ ಮೊದಲನೇ ಹೆಂಡತಿಯ ಮಗಳಿಗೂ ಅಷ್ಟೇ ಹಕ್ಕು ಇದೆ ಎಂದರೆ ಸರಿ. ನಾವು ಮೂಲತಃ ಬೇಲೂರು ತಾಲ್ಲೂಕಿನ ಹೊಸಮನಹಳ್ಳಿ ಗ್ರಾಮದವರು ಎಂದರೆ ಸರಿ. ಸದರಿ ಗ್ರಾಮದಲ್ಲಿ ನನ್ನ ಅಜ್ಜ-ಅಜ್ಜಿ ಮತ್ತು ತಂದೆ-ತಾಯಿ ವ್ಯವಸಾಯ ಮಾಡಿಕೊಂಡು ವಾಸವಿದ್ದರು ಎಂದರೆ ಸರಿ. ಹೊಸಮನಹಳ್ಳಿ ಗ್ರಾಮದಲ್ಲಿ ನನ್ನ ತಂದೆ ತಾಯಿ ಇದ್ದ ಮನೆ ಹಾಗೂ ಅವರಿಗೆ ಸೇರಿದ 10-15 ಎಕರೆ ಜಮೀನು ಇದೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಅಣ್ಣ. ನನ್ನ ತಂದೆ ಖರೀದಿ ಮಾಡಿರುವ ಬೇಲೂರು ಪೇಟೆಯಲ್ಲಿ ಇರುವ ಮನೆಯಲ್ಲಿ 3 ನೇ ಪ್ರತಿವಾದಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ಚಿಕ್ಕಮಗಳೂರು ಪೇಟೆಯಲ್ಲಿ ಕ್ರಯಕ್ಕೆ ಕೊಂಡಂತಹ ಮನೆಯಲ್ಲಿ 1 ನೇ ಪ್ರತಿವಾದಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಮಾರ್ಕೇಟ್ ರೋಡ್ ಅಗಲೀಕರಣದಲ್ಲಿ ಆ ಮನೆಯನ್ನು ಹೊಡೆದುಹಾಕಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಈಗ ಹೊಸಮನಹಳ್ಳಿಯಲ್ಲಿ ವಾಸವಿದ್ದಾರೆ. ನನ್ನ ತಂದೆಗೆ ಸೇರಿದ ಜಮೀನಿನಲ್ಲೇ 1 ನೇ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸರಿ.

ಹೊಸಮನಹಳ್ಳಿಯಲ್ಲಿರುವ ಜಮೀನು ಹಾಗೂ ಮನೆ, ಚಿಕ್ಕಮಗಳೂರು ಪೇಟೆಯಲ್ಲಿರುವ ಮನೆ ಮತ್ತು ಬೇಲೂರು ಪೇಟೆಯಲ್ಲಿರುವ ಮನೆಯಲ್ಲಿಯೂ ಸಹಾ ವಿಭಾಗ ಕೋರಿ ದಾವೆ ಸಲ್ಲಿಸಿದ್ದೀರ ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿನಲ್ಲಿ ಇರುವ ಜಮೀನುಗಳ ಮೇಲೆ ಮಾತ್ರ ವಿಭಾಗ ಕೇಳುತ್ತಿದ್ದೇವೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಜಮೀನು ಮತ್ತು ಮನೆಗಳು ಹಾಗೂ ದಾವ ಜಮೀನುಗಳು ಮೊದಲು ನನ್ನ ತಂದೆಯವರ ಹೆಸರಿನಲ್ಲಿ ಇದ್ದು ಅವರ ಮರಣಾನಂತರ ನನ್ನ ತಾಯಿ ಮಾಜನ್ ಬೀ ರವರ ಹೆಸರಿಗೆ ಬಂತು ಎಂದರೆ ಸರಿ. ನನ್ನ ತಾಯಿ ಜೀವಂತವಿದ್ದಾಗ ದಾವ

ಜಮೀನುಗಳನ್ನು 2 ಮತ್ತು 7 ನೇ ಪ್ರತಿವಾದಿಗಳಿಗೆ ನೋಂದಾಯಿತ ವಿಭಾಗಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ 5 ಮತ್ತು 6 ನೇ ಪ್ರತಿವಾದಿಯನ್ನಾಗಿ ಯಾರನ್ನು ಮಾಡಿದ್ದೇವೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾಜೀದ್, ಇಸಾಕ್, ಶಾಕೀರ ಬಾನು ಮತ್ತು ರಫೀಕ್ ಎನ್ನುವ 4 ಜನರ ವಿರುದ್ಧ ದಾಖಲಿಸಿದ್ದೇವೆ. ಈ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿದ್ದೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬುರುವುದಿಲ್ಲ. ಈಗ ನೋಡುತ್ತಿರುವ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಮತ್ತು ವಾದಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಂದೀಪುರ ಗ್ರಾಮದ ಸ.ನಂ.43 ರ ಜಮೀನಿನಲ್ಲಿ ವಿಭಾಗ ಕೋರಿ ಈ ದಾವೆಯನ್ನು ಸಲ್ಲಿಸಿದ್ದೇವೆ.

ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಗೆ ನಿಪಿ-1 ರಿಂದ 9 ರ ದಾಖಲೆಗಳನ್ನು ತೋರಿಸಿ ಅದರಲ್ಲಿ ವಂಶವೃಕ್ಷವನ್ನು ಗುರುತಿಸಿ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಹಾಗೂ ಈ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.